ಉಪಯೋಕ್ತವಾಗಿದ್ದಿತು. ಆದ್ದರಿಂದ ಈ ಹಿಂದಿನಂತೆಯೇ ಈಗಲೂ ಕಾವಂಗಾರಿಗಳನ್ನು ಕೈಕೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಲೋಕೋಪಯೋಗಿ ಸಚಿವರು ಮೇಲ್ಮನೆಯಲ್ಲಿರುತ್ತಾರೆ. ಮಾನ್ಯ ಸಚಿವರಿಗೆ ವಿಷಯವನ್ನು ತಿಳಿಸಿ ಮಾನ್ಯ ಸದಸ್ಯರಿಗೆ ಉತ್ತರವನ್ನು ತರಿಸಿಕೊಡುತ್ತೇನೆ.

(2) ರೈತರ ಜಮೀನುಗಳಲ್ಲಿ ಕಂಟೂರ್ ಬಂಡ್‌ಗಳನ್ನು ನಿರ್ಮಾಣ ಮಾಡಲು ರೈತರಿಂದಲೇ ಹಣ ವಸೂಲಿ ಮಾಡುತ್ತಿರುವುದು.

ಶ್ರೀ ಆರ್. ರಾಮಯ್ಯ.—ಮಾನ್ಯ ಅಧ್ಯಕ್ಷರೇ ಸರ್ಕಾರವು ರಾಜ್ಯಾದ್ಯಂತ ಭೂ ಸಂರಕ್ಷಣಾ ಇಲಾಖೆಯಿಂದ ರೈತರಿಗೆ ಜಮೀನುಗಳಲ್ಲಿ 'ಕಂಟೂರ್ ಬಂಡು'ಗಳನ್ನು ನಿರ್ಮಾಣ ಮಾಡಿರುವುದು ಸರಿಯಷ್ಟೆ. ಇವುಗಳ ನಿರ್ಮಾಣಕ್ಕೆ ಹಣವನ್ನು ಇಲಾಖೆಯ ಯೋಜನೆಯ ಅಡಿಯಲ್ಲಿ ಹಾಗೂ ಬರಗಾಲದ ಪರಿಹಾರ ಕಾವಂಗಾರಿಗಳ ಅಡಿಯಲ್ಲೂ ಮಾಡಲಾಗಿದೆ. ಇತ್ತೀಚೆಗೆ ಈ ಹಣವನ್ನು ರೈತರಿಂದ ಭೂ ತೆರಿಗೆ ರೂಪದಲ್ಲಿ ವಸೂಲು ಮಾಡಲು ಆದೇಶಿಸಿದೆ. ಆದರೆ ಸತತವಾಗಿ ಬರಗಾಲವನ್ನು ಅನುಭವಿಸಿದ ರೈತರಿಂದ ಕೂಡಲೇ ಈರೀತಿ ವಸೂಲು ಮಾಡುವುದು ಸರಿಯೇ ? ಜೊತೆಗೆ ಬರಗಾಲದ ಹಣವನ್ನು ಖರ್ಚು ಮಾಡಿದಂತ ಕಡೆ ವಸೂಲಾತಿಯ ಪ್ರಶ್ನೆ ಉದ್ಭವಿಸಲಾರದು. ಪ್ರಯುಕ್ತ ಸರ್ಕಾರ ಹಸಿರು ಕ್ರಾಂತಿಯನ್ನು ಯಶಸ್ವಿಗೊಳಿಸಲು ಮಾಡಿರುವ ಯತ್ನದಲ್ಲಿ ಇದೂ ಒಂದೆಂದು ಪರಿಗಣಿಸಿ ವಸೂಲಾತಿಯನ್ನು ಮನ್ನಾ ಮಾಡಲು ಕೋರುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಕೃಷಿ ಸಚಿವರು) —ಮಾನ್ಯ ಅಧ್ಯಕ್ಷರೇ ಈಗಾಗಲೇ ಸಣ್ಣ ಅತಿ ಸಣ್ಣ ರೈತರಿಂದ ಯಾವವಿಧವಾದ ಹಣವನ್ನು ವಸೂಲು ಮಾಡುತ್ತಿಲ್ಲ. ಇದರ ಬಗ್ಗೆ ಸರ್ಕಾರ ಈಗಾಗಲೇ ಆದೇಶವನ್ನು ಕೊಟ್ಟಿದೆ. ಆದರೆ ದೊಡ್ಡ ರೈತರಿಂದ ೧೯೮೫ ಮಾರ್ಚ್ ಆಕ್ಟೋಬರ್‌ಗೆ ಏನು ಹಣ ಬರಬೇಕಾಗಿತ್ತೋ ಅದರ ಬಗ್ಗೆ ೫೦ ರಷ್ಟು ಹಣವನ್ನು ಈಗಾಗಲೇ ಸರ್ಕಾರ ಮನ್ನಾ ಮಾಡಿ ಉಳಿದ ೫೦ ರಷ್ಟು ಹಣವನ್ನು ಕಂತು ಮೂಲಕ ವಸೂಲು ಮಾಡಲು ಮೂರು ವರ್ಷಗಳ ಕಾಲಾವಕಾಶವನ್ನು ಕೊಟ್ಟಿದೆ. ಮತ್ತೆ ಒಂದು ವರ್ಷ ಕಾಲ ಅವಧಿಯನ್ನೂ ಕೂಡ ಕೊಡಬೇಕೆಂದು ಮಾಡಿದೆ. ಬರಗಾಲದ ಕಾವಂಗಾರಿಗಳಿಂದ ದೊಡ್ಡ ರೈತರಿಗೆ ಬೆನಿಫಿಟ್ ಆಗುತ್ತಿದೆ, ಸಣ್ಣ ರೈತರಿಗೆ ಅನುಕೂಲವಾಗಬೇಕೆಂದರೆ ಅವರಿಂದ ಏನು ಹಣವನ್ನು ವಸೂಲು ಮಾಡುತ್ತಿರುತ್ತಾರೆ ಅದರಿಂದ ರಿಯಾಯತಿಯನ್ನು ಕೊಡಬೇಕೆಂದು ಮಾನ್ಯ ಸದಸ್ಯರು ಕೇಳಿರುತ್ತಾರೆ, ಅದನ್ನು ಪರಿಶೀಲನೆ ಮಾಡುತ್ತೇನೆ.

(3) ಸಂಡೂರು ತಾಲ್ಲೂಕಿನ ತೋರಣಗಲ್ಲು ಗ್ರಾಮೀಣ ಶಿಕ್ಷಣ ಸಂಸ್ಥೆಯಲ್ಲಿ ಪರಿಶಿಷ್ಟ ವರ್ಗದವರನ್ನು ಆಯ್ಕೆ ಮಾಡದಿರುವುದು.

ಶ್ರೀ ಯು. ಭೂಪತಿ.—ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ತೋರಣಗಲ್ಲು ಗ್ರಾಮದಲ್ಲಿರುವ ತೋರಣಗಲ್ಲು ಗ್ರಾಮೀಣ ಶಿಕ್ಷಣ ಸಂಸ್ಥೆಯಿಂದ ನಡೆಯುತ್ತಿರುವ 'ಶ್ರೀ ಬಸವೇಶ್ವರ ಗ್ರಾಮಾಂತರ ಪ್ರೌಢಶಾಲೆಯಲ್ಲಿ ಇತ್ತೀಚೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರನ್ನು ಆಯ್ಕೆ ಮಾಡಬೇಕಾದ ಶಿಕ್ಷಕರ ಹುದ್ದೆಗಳಿಗೆ ಅವರನ್ನು ನೇಮಕ ಮಾಡದೆ ಬೇರೆ ವರ್ಗದ ಪಂಗಡದ ಜನರನ್ನು ಆಯ್ಕೆ ಮಾಡಿದ್ದಾರೆ. ಈ ರೀತಿ ಶೇಕಡ ೧೮ರ ನೇಮಕಾತಿಗಾಗಿ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಖಾಸಗೀ ಪ್ರೌಢ ಹಾಗೂ ಪ್ರಾಥಮಿಕ ಶಾಲೆಗಳಲ್ಲಿ ಕಾನೂನುಬಾಹಿರವಾಗಿ, ಸಂವಿಧಾನಾತ್ಮಕ ಹಕ್ಕುಗಳನ್ನು ಮೀರಿದು ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರಿಗೆ ಅನ್ಯಾಯ ಮಾಡುತ್ತಿರುವುದು ಸರ್ವೇಸಾಮಾನ್ಯವಾಗಿದೆ. ಈ ನಿಟ್ಟಿನಲ್ಲಿ ಸದರಿ ಶಾಲೆಯ ಆಡಳಿತ ಮಂಡಲಿಯ ಮೇಲೆ ಹಾಗೂ ಬೇರೆ ಶಿಕ್ಷಣ ಸಂಸ್ಥೆಗಳ ಮೇಲೆ ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿದೆ ಎಂದು ತಿಳಿಯಬಯಸಿ ಈ ವಿಷಯವನ್ನು ಸದನದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಂ. ರಘುಪತಿ.—ಸಂಬಂಧಪಟ್ಟ ಮಂತ್ರಿಗಳು ಆ ಸದನದಲ್ಲಿದ್ದಾರೆ, ತಮಗೆ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಯು. ಭೂಪತಿ.— ನಾನು ಈ ಬಗ್ಗೆ ಹೋದ ವರ್ಷವೇ ಪ್ರಶ್ನೆ ಕೇಳಿದ್ದೆ. ಇನ್ನೂ ನನಗೆ ಮಂತ್ರಿಗಳು ಉತ್ತರವನ್ನು ಕಳುಹಿಸಿಕೊಟ್ಟಿಲ್ಲ. ಶ್ರೀ ಸೋಮಶೇಖರರವರಿಗೆ ಬರೆದು ಕೂಡ ಹೇಳಿದ್ದೇನೆ.

ಅಧ್ಯಕ್ಷರು.—ಉತ್ತರ ತರಿಸಿಕೊಡುತ್ತೇನೆಂದು ಹೇಳಿದ್ದಾರಲ್ಲ ಬಿಡಿ. ಅವರು ಭರವಸೆ ಕೊಟ್ಟ ಮೇಲೆ ಅದನ್ನು ಭರವಸೆ ಸಮಿತಿಯವರು ನೋಡುತ್ತಾರೆ. ಈಗ ಮತ್ತೆ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಯು. ಭೂಪತಿ.—ಇನ್ನು ಉತ್ತರ ತೆಗೆದುಕೊಳ್ಳುವುದಕ್ಕೆ ಬೇರೆ ಯಾವ ಪ್ರಾವಿಷನ ಇದೆ ? ನಾವು ಕೇಳಿದ್ದು ಯಾವುದಕ್ಕೂ ಉತ್ತರ ಬರುವುದಿಲ್ಲ. ಸುಮ್ಮನೆ ಪತಕ್ಕೆ ಇದನ್ನು ಓದ ಬೇಕೆಂದು ಅರ್ಥವಾಗುವುದಿಲ್ಲ. ಹೋದ ವರ್ಷ ಎಲ್.ಎ. ಕ್ವೆಶ್ಚನ್ ಹಾಕಿಯೂ ನಿಮಗೆ ಉತ್ತರ ಬಂದಿಲ್ಲ,

ಅಧ್ಯಕ್ಷರು. —ಉತ್ತರ ಬಂದಿಲ್ಲ ಅಂದರೆ ತರಿಸಿ ಕೊಡುತ್ತಾರೆ.

ಶ್ರೀ ಎಂ. ರಘುಪತಿ.—ಶಿಕ್ಷಣ ಸಚಿವರು ಆ ಸಚಿವರು ಆ ಸದನದಲ್ಲಿದ್ದಾರೆ. ಅಲ್ಲಿ ಇವತ್ತು ಅವರಿಗೆ ಸಂಬಂಧಪಟ್ಟ ಪ್ರಶ್ನೆಗಳು ಇವೆ.

(4) ವಿದ್ಯಾ ಇಲಾಖೆಯಿಂದ ಉಚಿತ ಪಠ್ಯ ಪುಸ್ತಕಗಳು ಎಲ್ಲಾ ವಿದ್ಯಾರ್ಥಿಗಳಿಗೆ ದೊರಕದೇ ಇರುವುದು.

ಶ್ರೀ ಆರ್. ವೆಂಕಟರಾಮಯ್ಯ.—ಇದು ರಘುಪತಿಯವರ ಮಗು ಇದೆ. ಇದರ ಬಗ್ಗೆ ಅವರೇ ವಿವರಣೆ ಕೊಡಲಿ. ಕರ್ನಾಟಕ ಸರ್ಕಾರ ವಿದ್ಯಾ ಇಲಾಖೆಯು ಉಚಿತ ಪಠ್ಯ ಪುಸ್ತಕದ ವಿತರಣೆಯನ್ನು ಒಪ್ಪಿದ್ದರೂ ಇನ್ನೂ ಅನೇಕ ತರಗತಿಗಳಲ್ಲಿ ಉಚಿತ ಪಠ್ಯ ಪುಸ್ತಕಗಳನ್ನು ಎಲ್ಲಾ ವಿದ್ಯಾರ್ಥಿಗಳಿಗೆ ಕೊಟ್ಟಿಲ್ಲ, ವಂತು ಮಾರ್ಕೆಟ್ಟಿನಲ್ಲಿ ಆದರೂ ಈ ಪಠ್ಯಪುಸ್ತಕಗಳನ್ನು ಪೂರಾಟಕ್ಕೆ ಬಿಟ್ಟಿಲ್ಲ. ಈ ಪುಸ್ತಕಗಳಲ್ಲಿ ಒಂದು ಪರಡು ಪುಸ್ತಕಗಳನ್ನು ತರಗತಿಗಳಲ್ಲಿ ಹಂಚಿದೆ. ವಿದ್ಯಾರ್ಥಿ ನಿಲಯಗಳಲ್ಲಿ ಮಾತ್ರ ಪುಸ್ತಕಗಳನ್ನು ಹಂಚಿದೆ. ವಿದ್ಯಾರ್ಥಿಗಳು ದಿನವಿಡೀ ಪುಸ್ತಕಗಳನ್ನು ಎರವಲು ಪಡೆದು ಓದಲು ಪುರುತ್ಸಿಸಿ ಓಡಾಡಬೇಕಾಗಿದೆ ಉಪಾಧ್ಯಾಯರಂತೂ ವಿದ್ಯಾರ್ಥಿಗಳಿಗೆ ತಾವು ಹೇಳ್ದೇ ಪಾಠವಾಗಿದೆ. ವಿದ್ಯಾಭ್ಯಾಸದ ವರ್ಷ ವಂಗಿಯುತ್ತಾ ಬಂತಾದರೂ ಸರ್ಕಾರ ಪರಿಹಾರ ಕೊಡದೆ ಕಾಲ ತಳ್ಳುತ್ತಿರುವುದು ಖಂಡನೀಯ. ಇದು ಲಕ್ಷಾಂತರ ವಿದ್ಯಾರ್ಥಿಗಳ ಬವಣೆ. ಸದನದಲ್ಲಿ ಈ ಬಗ್ಗೆ ಈ ಒಂದು ಅನ್ಯಾಯವನ್ನು ತುರ್ತಾಗಿ ಸರಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವ ಬಗ್ಗೆ ಮಾನ್ಯ ಪ್ರಾಥಮಿಕ ವಿದ್ಯಾ ಮಂತ್ರಿಗಳ ಹೇಳಿಕೆಯನ್ನು ಕೇಳಬಯಸುತ್ತೇನೆ. ಶಾಲೆ ಪ್ರಾರಂಭವಾಗಿ ೬ ತಿಂಗಳಾದರೂ ಇನ್ನೂ ಪುಸ್ತಕಗಳನ್ನು ಕೊಟ್ಟಿಲ್ಲ.

ಶ್ರೀ ಎಂ. ರಘುಪತಿ.—ಯಾವ ಯಾವ ಶಾಲೆಗಳಲ್ಲಿ ಪುಸ್ತಕಗಳನ್ನು ಕೊಟ್ಟಿಲ್ಲವೆಂದು ಮಾಹಿತಿ ಕೊಟ್ಟರೆ ಒಳ್ಳೆಯದು. ಇಡೀ ರಾಜ್ಯದಲ್ಲಿ ತಲುಪಿಲ್ಲ ಎನ್ನುವುದಕ್ಕೆ ಬದಲು ಇಂಥ ಶಾಲೆಗಳಲ್ಲಿ ತಲುಪಿಲ್ಲವೆಂದರೆ ಅನುಕೂಲವಾಗುತ್ತದೆ. ನಮ್ಮ ಮಾಹಿತಿ ಪ್ರಕಾರ ೯೯ ಪರ್ಸೆಂಟ್ ಶಾಲೆಗಳಿಗೆ ಪುಸ್ತಕಗಳು ತಲುಪಿವೆ. ಆದ್ದರಿಂದ ಬರುವ ವರ್ಷ ಎಲ್ಲಾ ಶಾಲೆಗಳಿಗೂ ಆದ್ಯತಾ ಕಾರ್ಯಕ್ರಮ ಹಾಕಿ ಕೊಂಡು ಪುಸ್ತಕಗಳನ್ನು ಒದಗಿಸುತ್ತೇವೆ.

ಅಧ್ಯಕ್ಷರು.—ನಿಯಮ ೩೫ರ ಪ್ರಕಾರ ಎತ್ತಿರುವ ಮಾನ್ಯ ವೆಂಕಟರಾಮಯ್ಯನವರ ಪ್ರಶ್ನೆಗೆ ಮಾನ್ಯ ಮಂತ್ರಿಗಳು ೩ ದಿನಗಳಲ್ಲಿ ಉತ್ತರ ಒದಗಿಸುವುದಾಗಿ ತಿಳಿಸಿದ್ದಾರೆ.

ಶ್ರೀ ಯು. ಭೂಪತಿ.—ಅವರು ನೋಡಿದರೆ ಉತ್ತರ ಕೊಟ್ಟರು, ತಾವು ಹೀಗೆ ಹೇಳುತ್ತಿದ್ದೀರಿ. ನಾವು ಯಾವುದನ್ನು ನಂಬಬೇಕು ?

ಅಧ್ಯಕ್ಷರು.—ಈಗ ಉತ್ತರ ಹೇಳಿಯಾಗಿದೆ, ತಾವು ಕುಳಿತುಕೊಳ್ಳಿ.